ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.
ಸಿಸಿ ನಂಬರ್:- 729/2024

ಸಾಕ್ಷಿಯ ಹೆಸರು : ಶಿವರುದ್ರಯ್ಯ ಸಿ.ಡಬ್ಲ್ಯು 1
ತಂದೆಯ ಹೆಸರು : ಚಿಕ್ಕವೀರಯ್ಯ ಪಿ.ಡಬ್ಲ್ಯು 1

ವಯಸ್ಸು : 59 ವರ್ಷ

ಉದ್ಯೋಗ : ಅಬಕಾರಿ ಉಪನಿರೀಕ್ಷಕರು

ವಾಸ ಸ್ಥಳ : ತರೀಕೆರೆ

ದಿನಾಂಕ:29.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:-

ನಾನು ಜನವರಿ 2023 ರಿಂದ ತರೀಕೆರೆಯಲ್ಲಿ ಅಬಕಾರಿ ಉಪನಿರೀಕ್ಷಕರು ಎಂದು ಕೆಲಸ ಮಾಡಿದ್ದೇನೆ. ಈ ಪ್ರಕರಣದಲ್ಲಿದಿನಾಂಕ 16.09.2024 ರಂದು ಸಂಜೆ 5 ಗಂಟೆಯ ಸಮಯದಲ್ಲಿ ನಾನು ಮತ್ತು ನನ್ನ ಸಿಬ್ಬಂದಿ ಅಜ್ಜಂಪುರ ತಾಲ್ಲೂಕಿನ ಶಿವನಿ ಗ್ರಾಮದ ಸುತ್ತ ಮುತ್ತ ಪ್ರದೇಶದಲ್ಲಿ ಗಸ್ತು ಕರ್ತವ್ಯದಲ್ಲಿದ್ದಾಗ ಹರಿಯನ ಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಒಬ್ಬ ಆಸಾಮಿಯು ಅಕ್ರಮವಾಗಿ ಮದ್ಯವನ್ನು ಶೇಖರಿಸಿ ಮಾರಾಟ ಮಾಡುತ್ತಿದ್ದಾನೆ ಎಂಬ ಮಾಹಿತಿ ಬಂದ ಮೇಲೆ ಅದೇ ವಾಹನದಲ್ಲಿ ನಮ್ಮ ಸಿಬ್ಬಂದಿಯ ಜೊತೆ ಮಾಹಿತಿ ಬಂದ ಸ್ಥಳದ ಕಡೆಗೆ ಹೊರಟೆನು. ಶಿವನಿ ಸರ್ಕಲ್ನಲ್ಲಿ ಇಬರು ಸಾಕ್ಷಿದಾರರನ್ನು ಪಂಚರನ್ನಾಗಿ ಕರೆದುಕೊಂಡೆನು. ನಂತರ ಮಾಹಿತಿ ಬಂದ ಸ್ಥಳಕ್ಕೆ ಹೋದಾಗ ಆರೋಪಿಯು ಅಲ್ಲಿ ನಿಂತಿದ್ದನು. ಆತನ ಕೈಯಲ್ಲಿ ಒಂದು ಕಪ್ಪು ಬಣ್ಣದ ಪ್ಲಾಸ್ಟಿಕ್ ಚೀಲ ಇದ್ದು ಅದನ್ನು ನೋಡಲಾಗಿ ಅದರಲ್ಲಿ 90 ಮಿ.ಲಿ ಯ 55 ರಾಜಾ ವಿಸ್ಕಿ ಸ್ಯಾಚೇಟುಗಳನು ಇರುವುದು ಕಂಡು ಬಂತು. ಅವುಗಳನ್ನು ಇಟ್ಟುಕೊಳ್ಳಲು ಅಥವಾ ಸಾಗಾಟ ಮಾಡಲು ಆರೋಪಿಯ ಬಳಿ ಯಾವುದೇ ರಹದಾರಿ ಇರಲಿಲ್ಲ. ವಿಚಾರಿಸಲಾಗಿ ಆತನು ತನ್ನ ಹೆಸರನ್ನು ಮಂಜುನಾಥ ಎಂದು ತಿಳಿಸಿದನು. ಕಾರಣ ಚಾಸ-2 ಮತ್ತು 3 ರವರ ಸಮಕ್ಷಮ ಸಂಜೆ 5 ಗಂಟೆಯಿಂದ 6 ಗಂಟೆಯ ಮಧ್ಯದಲ್ಲಿ ಪಂಚನಾಮೆಯ್ನು ಜರುಗಿಸಿ ಮದ್ಯವನ್ನು ನನ್ನ ವಶಕ್ಕೆ ಪಡೆದಿರುತ್ತೇನೆ. ಸ್ಥಳದಲ್ಲಿಯೇ ಪಂಚನಾಮೆಯನ್ನು ಬರೆದು ಸಾಕ್ಷಿದಾರರ ಸಹಿಯನ್ನು ಪಡೆದುಕೊಂಡಿರುತ್ತೇನೆ ಮತ್ತು ಮದ್ಯವನ್ನು ಒಂದು ಬಿಳಿ ಚೀಲಕ್ಕೆ ಹಾಕಿ ರಾಸಾಯನಿಕ ಪರೀಕ್ಷೆಗಾಗಿ ಸೀಲು ಮಾಡಿ ಇಟ್ಟಿದ್ದೇನೆ ಮತ್ತು ಚೀಲಕ್ಕೆ ಗುರುತಿನ ಚೀಟಿಗಳನ್ನು ಅಂಟಿಸಿದ್ದೇನೆ. ಆರೋಪಿ ಮತ್ತು ಮು.ಮಾಲಿನೊಂದಿಗೆ ಠಾಣೆಗೆ ಹಿಂದಿರುಗಿ ಸರ್ಕಾರದ ಪರವಾಗಿ ನಾನೇ ದೂರನ್ನು ಕೊಟ್ಟಿರುತ್ತೇನೆ. ಆರೋಪಿಗೆ ಕಲಂ.41 (ಎ) ಅಡಿಯಲ್ಲಿ ನೋಟೀಸು ಕೊಟ್ಟು ಕಳುಹಿಸಿದ್ದೇನೆ. ಈ ದಿನ ಆರೋಪಿ ನ್ಯಾಯಾಲಯದ ಮುಂದೆ ಇದ್ದಾನೆ. ನಾವು ಅಮಾನತ್ತು ಪಡಿಸಿಕೊಂಡ ಮದ್ಯವನ್ನು ನೊಡುತ್ತಿದ್ದು ಅವುಗಳನ್ನು ಒಟ್ಟಾಗಿ ಮು.ಮಾ.1 ಎಂದು ಗುರುತಿಸಲಾಯಿತು. ಪಪಂಚನಾಮೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು 1(ಎ) ಎಂದು, ಭಾವಚಿತ್ರವನ್ನು ನಿಪಿ-2 ಎಂದು, ವರದಿಯನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು 3(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಮಾಹಿತಿ ಬಂದಾಗ ನಾವು ಶಿವನಿ ಗ್ರಾಮದ ಸುತ್ತ ಮುತ್ತ ಗಸ್ತು ಮಾಡುತ್ತಿದ್ದೆವು. ಪಂಚರನ್ನು ಶಿವನಿ ಸರ್ಕಲ್ನಿಂದ ಕರೆದುಕೊಂಡೆವು. ಅವರನ್ನು ಪರಿಚಯ ಮಾಡಿಕೊಂಡ ನಂತರ ನೋಟೀಸು ಕೊಟ್ಟಿದ್ದೇವೆ. ಅವರಿಗೆ ಯಾವುದೇ ನೋಟೀಸು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದ ರೀತಿ ನಮಗೆ ಯಾವುದೇ ಮಾಹಿತಿ ಬಂದಿಲ್ಲ, ನಾವು ಆರೋಪಿಯನ್ನು ಹಿಡಿದಿಲ್ಲ, ಆತನ ಕಡೆಯಿಂದ ಯಾವುದೇ ಮದ್ಯವನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾವು ಯಾವುದೇ ಪಂಚನಾಮೆಯನ್ನು ಕೂಡ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಮತ್ತು ಮು.ಮಾಲಿಗೂ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಕಛೇರಿಯ ಅಂಖ್ಯೆ-ಸಂಖ್ಯೆಗೋಸ್ಕರ ಸುಳ್ಳು ಪ್ರಕರಣವನ್ನು ಹಾಕಲಾಗಿದೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.